**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 16.06.2026**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಸ್ ವಕೀಲರಿಂದ**

**1.** ನನ್ನ ತಾಯಿ ಆರೋಗ್ಯವಾಗಿದ್ದಾರೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನನ್ನ ತಾಯಿಗೆ ಸ್ಟ್ರೋಕ್ ಆಗಿರುತ್ತದೆ ಎಂದು ನುಡಿದರು. ನನ್ನ ತಾಯಿ ಬಂದು ಸಾಕ್ಷಿ ಹೇಳಲು ತೊಂದರೆ ಇರುವುದಿಲ್ಲ ಆದರೆ ಅವರಿಗೆ ಧ್ವನಿ ಸ್ವಲ್ಪ ತೊದಲುತ್ತದೆ . ನನ್ನ ತಾಯಿಗೂ ಮತ್ತು ಹೆಚ್ ಕೆ ಗೋವಿಂದರವರಿಗೂ ಸುಮಾರು 45–46 ವರುಷಗಳ ಹಿಂದೆ ಮದುವೆ ಆಗಿರುತ್ತದೆ ತಿಂಗಳು ಮತ್ತು ದಿನಾಂಕ ನನಗೆ ನೆನಪಿಲ್ಲ. ಮದುವೆಯ ಫೋಟೋಗಳು ನಮ್ಮ ಬಳಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಜೊತೆಯಲ್ಲಿ ನಿಂತಿರುವ ಫೋಟೋಗಳು ಇವೆ ಎಂದು ನುಡಿದರು.

2. ನನ್ನ ತಂದೆಗೆ ಎರಡು ಹೆಸರುಗಳು ಇದ್ದು , ಒಂದು ಗೋವಿಂದ ಆರ್ ಇನ್ನೊಂದು ರಾಮ ಆರ್ ಎಂದು ಕರೆಯಲಾಗಿರುತ್ತದೆ ಸಾಕ್ಷಿಯು ಮುಂದುವರೆದು ನನ್ನನ್ನು ಶಾಲೆಗೆ ಸೇರಿಸಬೇಕಾದರೆ ನನ್ನ ತಂದೆ ಬಂದಿರುವುದಿಲ್ಲ ಪಕ್ಕದ ಮನೆಯವರು ನನ್ನನ್ನು ಶಾಲೆಗೆ ಸೇರಿಸಿದ್ದು ಅಲ್ಲಿ ರಾಮ ಎಂದು ನನ್ನ ತಂದೆಯ ಹೆಸರನ್ನು ನೀಡಲಾಗಿರುತ್ತದೆ ಎಂದು ನುಡಿದರು. ಗೋವಿಂದ ಅಲಿಯಾಸ್ ರಾಮ ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲಾತಿ ಇರುವುದಿಲ್ಲ ಸಾಕ್ಷಿಯು ಮುಂದುವರೆದು ದೃಡೀರಕರಣ ಪತ್ರವನ್ನು ಮಾಡಿಕೊಡುತ್ತೇನೆ ಎಂದು ನುಡಿದರು. ನಾನು ನನ್ನ ಶಾಲೆಯ ದಾಖಲಾತಿಗಳಲ್ಲಿ ಯಾವುದೆ ತಿದ್ದುಪಡಿ ಮಾಡಲು ಪ್ರಯತ್ನಿಸಿರುವುದಿಲ್ಲ .

3. ನಾನು ನನ್ನ ವಾದ ಪತ್ರದಲ್ಲಿ ಅಥವಾ ಪ್ರಮಾಣ ಪತ್ರದಲ್ಲಿ ಗೋವಿಂದ ಅಲಿಯಾಸ್ ರಾಮ ಎಂದು ತೋರಿಸಿರುವುದಿಲ್ಲ. ಆ ರೀತಿ ತೋರಿಸಲು ಯಾವುದೆ ತೊಂದರೆ ಇರುವುದಿಲ್ಲ. ಗೋವಿಂದ ರವರ ತಂದೆ ಹರಿವೆ ಕಾಳಯ್ಯ ರವರಿಗೆ 6 ಜನ ಮಕ್ಕಳು . ಅವರ ಹೆಸರು ಮಾಯಮ್ಮ , ಖದ್ರಿ , ಕರಿಯಮ್ಮ , ಸುಕಂತ್ರಿ ಅಲಿಯಾಸ್ ಸುಕನ್ಯ , ಪದ್ಮಾವತಿ ಅಲಿಯಿಾಸ್ ಜಯಾ , ಕೊನೆಯದಾಗಿ ನಮ್ಮ ತಂದೆ ಗೋವಿಂದ ರವರುಗಳು ಆಗಿರುತ್ತಾರೆ. ದಾವಾಸ್ವತ್ತು ಹರೆವೆ ಕಾಳಯ್ಯರವರಿಗೆ ಸರಕಾರದವರಿಂದ ಮಂಜೂರು ಆಗಿರುತ್ತದೆ . ಹರವೆ ಕಾಳಯ್ಯರವರು ನನ್ನ ತಂದೆ ಹೆಸರಿಗೆ ಯಾವುದೆ ದಾನ ಪತ್ರವನ್ನು ಅಥವಾ ದಾಖಲಾತಿಗಳು ಮಾಡಿರುವುದಿಲ್ಲ.

4. ದಾವ ಶೆಡ್ಯೂಲ್ ಸ್ವತ್ತಿನ ಮೇಲೆ ಹೆಚ್ ಕೆ ಗೋವಿಂದ ರವರಲ್ಲದೇನೆ ಉಳಿಕೇ ಹೆಣ್ಣು ಮಕ್ಕಳಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಹರೆವೆ ಕಾಳಯ್ಯ ರವರ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂಾ ಸಹ ಹಕ್ಕು ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ ಕೆ ಗೋವಿಂದ ರವರೆ ಬೇರೆ ಹಾಗೂ ರಾಮು ರವರೆ ಬೇರೆ ಎಂದರೆ ಸುಳ್ಳು . ನನ್ನ ಶಾಲಾ ದಾಖಲಾತಿ , ರೇಶನ್ ಕಾರ್ಡ್ , ಆದಾರ್ ಕಾರ್ಡ್ , ಗುರುತಿನ ಚೀಟಿ ಎಲ್ಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಏನೆಂದು ಇರುತ್ತದೆ ಎಂದರೆ ಸಾಕ್ಷಿಯು ನನ್ನ ಶಾಲಾ ದಾಖಲಾತಿಗಳಲ್ಲಿ ತಂದೆಯ ಹೆಸರು ರಾಮು ಎಂದು ಇದ್ದು ಉಳಿದ ದಾಖಲಾತಿಗಳಲ್ಲಿ ಗೋವಿಂದ ಎಂದು ಇರುತ್ತದೆ ಎಂದು ನುಡಿದರು. ಹೆಚ್ ಕೆ ಗೋವಿಂದ ರವರ ಹೆಂಡತಿ ಮತ್ತು ಮಕ್ಕಳು 1 ನೆ ಪ್ರತಿವಾದಿ ರಿಂದ 3 ನೆ ಪ್ರತಿವಾದಿಗಳಾಗಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಏನಾದರೂ ನಾನು ಗೋವಿಂದ

ರವರ ಮಗನಾಗಿದ್ದರೆ ಶಾಲಾ ದಾಖಲಾತಿಗಳಲೆಲ್ಲಾ ತಿದ್ದು ಪಡಿ ಮಾಡಿಸುತ್ತಿದ್ದೆ ಎಂದರೆ ಸಾಕ್ಷಿಯು ನನ್ನ ಎಸ್ ಎಸ್ ಎಲ್ ಸಿ ದಾಖಲಾತಿಗಳಲ್ಲಿ ರಾಮು ಎಂದು ಇದ್ದು ಅದೆ ಮುಂದುವರೆಯಲು ಎಂದು ಅಂದುಕೊಂಡಿರುತ್ತೇನೆ ಈ ರೀತಿ ಆಗುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ ಎಂದು ನುಡಿದರು.

5. ನಾನು ಮಾಸ್ಟರ್ ಡಿಗ್ರಿ ಮಾಡಿರುತ್ತೇನೆ. ನಾನು ಸಹಕಾರ ಸಂಘದಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುತ್ತೇನೆ . ನಾನು ಕೆಲಸ ಮಾಡುತ್ತಿರುವ ಸಹಕಾರ ಸಂಘದಲ್ಲಿ ನನಗೆ ಸಂಬಂದಪಟ್ಟ ಎಲ್ಲಾ ದಾಖಲಾತಿಗಳಲ್ಲಿ ರಾಮ ಎಂದು ನಮೂದು ಆಗಿರುತ್ತದೆ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳು ಸುಳ್ಳು ನಾನೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಗೋವಿಂದರವರ ಅಂತ್ಯಕ್ರಿಯೆಯನ್ನು ನಾವೆ ಮಾಡಿರುತ್ತೇವೆ . ಗೋವಿಂದ ರವರ ಅಂತ್ಯಕ್ರಿಯೆಯನ್ನು 1 ನೆ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸುಳ್ಳು .

6. ನನ್ನ ತಾಯಿ ನ್ಯಾಯಾಲಯದ ಮುಂದೆ ಬಂದರೆ ಸತ್ಯ ತಿಳಿದು ಬರುತ್ತದೆ ಎಂದು ನಾನು ನನ್ನ ತಾಯಿಯನ್ನು ಸಾಕ್ಷಿ ಹೇಳಲು ಕರೆದುಕೊಂಡು ಬರದೆ ಅವರಿಗೆ ಧ್ವನಿ ತೊದಲುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಹೆಚ್ ಕೆ ಗೋವಿಂದ ಅಲಿಯಾಸ್ ರಾಮ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ . ಅದೆ ರೀತಿ ನಿಪಿ 2 ರಲ್ಲೂ ಹೆಚ್ ಕೆ ಗೋವಿಂದ ಅಲಿಯಾಸ್ ರಾಮ ಎಂದು ನಮೂದು

ಆಗಿರುವುದಿಲ್ಲ ಎಂದರೆ ಸರಿ . ಅದೆ ರೀತಿ ನಿಪಿ 3 ರಲ್ಲೂ ಸಹ ಹೆಚ್ ಕೆ ಗೋವಿಂದ ಅಲಿಯಾಸ್ ರಾಮ ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿ . ಹೆಚ್ ಕೆ ಗೋವಿಂದ ರವರು ನನ್ನ ತಾಯಿ ಇಂದ್ರಮ್ಮರವರಿಗೆ ದಾನ ಪತ್ರ ಬರೆದು ಕೊಡಲು ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ನನ್ನ ತಾಯಿ ನಿಪಿ 5 ನ್ನು ಸೃಷ್ಟಿ ಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಗೋವಿಂದ ರವರ ಮಗನಾಗಿರುವುದಿಲ್ಲ ಹಾಗೂ ನನ್ನ ತಾಯಿ ಅವರ ಹೆಂಡತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಗಳೆ ದಾವಾಶೆಡ್ಯೂಲ್ ಆಸ್ತಿಯಲ್ಲಿ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

7. ಪ್ರತಿವಾದಿಗಳು ಯಾವ ತಿಂಗಳ ಮತ್ತು ಯಾವ ತಾರೀಖುನಂದು ಮತ್ತು ಇಸವಿಯಂದು ತೊಂದರೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮುಂದುವರೆದು 2023-24 ರಂದು ನನ್ನ ಆಸ್ತಿ ಎಂದು ಪ್ರತಿವಾದಿಗಳು ಮನೆ ಬಳಿ ಬಂದಿದ್ದು ಆಗ ತೊಂದರೆ ಕೊಟ್ಟಿರುತ್ತಾರೆ ಎಂದು ನುಡಿದರು. ಪ್ರತಿವಾದಿಗಳು ಹೆಚ್ ಕೆ ಗೋವಿಂದ ರವರ ವಿರುದ್ಧ ಅಸಲುದಾವಾ ಸಂಖ್ಯೆ 93/2019 ರಂತೆ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಗೋವಿಂದ ರವರು ನ್ಯಾಯಾಲಯದಿಂದ ಸಮನ್ಸ ಬಂದಿದ್ದರೂ ನ್ಯಾಯಾಲಯಕ್ಕೆ ಹಾಜರಾಗದೆ ಏಕಪಕ್ಷೀಯರಾಗಿ ಗೋವಿಂದ ರವರ ವಿರುದ್ಧ ಆದೇಶವಾಗಿರುತ್ತದೆ ಎಂದರೆ ಸುಳ್ಳು .

8. ಸದರಿ ಪಿರಿಯಾಪಟ್ಟದಲ್ಲಿ ದಾಖಲಿಸಿದ್ದ ದಾವೆ ಶೆಡ್ಯೂಲ್ ಸ್ವತ್ತಿನ ಮೌಲ್ಯ ಹೆಚ್ಚಾಗಿದೆ ಎಂದು ವಾದ ಪತ್ರ ಹಿಂತಿರುಗಿಸಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಅವರ ತಂದೆ ವಿರುದ್ಧ ಅಸಲು ದಾವಾ ಸಂಖ್ಯೆ 29/2023 ರಂತೆ ದಾಖಲಿಸಿದ್ದ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ಡಿಕ್ರಿಯಾಗಿರಬಹುದು ಯಾಕೆಂದರೆ ನನ್ನ ತಾಯಿಯ ಹೆಸರಿನಲ್ಲಿ ಖಾತೆ ಆದ ನಂತರ ಪುನಹಃ 3 ರಿಂದ 4 ತಿಂಗಳು ಕಳೆದು ಆ ಆರ್ ಟಿ ಸಿ ಯನ್ನು ಪರಿಶೀಲಿಸಿದಾಗ ಡಿಕ್ರಿಯಾಗಿರುವ ವಿಚಾರ ತಿಳಿದು ಬಂದಿರುತ್ತದೆ ಎಂದು ನುಡಿದರು. ಸದರಿ ಡಿಕ್ರಿಯ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇನೆ. ದಾವಾ ಶೆಡ್ಯೂಲ್ ಸ್ವತ್ತಿನ ಅಸೆಸ್‌ಮೆಂಟ್ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ಪೂರ್ವಕ್ಕೆ 20 ಅಡಿ , ಪಶ್ಚಿಮಕ್ಕೆ 15-16 ಅಡಿ, ಉತ್ತರಕ್ಕೆ 15-16 ಅಡಿ , ದಕ್ಷಿಣಕ್ಕೆ 12-15 ಅಡಿ ಇರಬಹುದು .

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ